ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.
ಸಿಸಿ ನಂಃ **18/2016**

| | | |
|---|---|---|
| ಹೆಸರು | ನಾಗಮಾದು | ಸಿ.ಡಬ್ಲ್ಯೂ **- 9** |
| ತಂದೆಯ ಹೆಸರು | ಸಾವುಕಯ್ಯ | ಪಿ.ಡಬ್ಲ್ಯೂ **- 6** |
| ವಯಸ್ಸು | 62 ವರ್ಷ | |
| ಉದ್ಯೋಗ | ವ್ಯವಸಾಯ ಮತ್ತು ಎಲೆಕ್ಟ್ರೀಷಿಯನ್ | |
| ವಾಸ ಸ್ಥಳ | ವಾಸುವಳ್ಳಿ | |

ಸಾಕ್ಷಿಗೆ ದಿನಾಂಕಃ 09.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿರುವುದಿಲ್ಲ. ಆರೋಪಿತರು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ.

ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.

ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ

ವಾಸುವಳ್ಳಿ ಗ್ರಾಮದ ಸರ್ವೆ ನಂ. 23/2 ರಲ್ಲಿ 2 ಎಕರೆ 15 ಗುಂಟೆ ಚಾಸಾ 1 ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ದಿ: 25.02.1993 ರಂದು ಚಾಸಾ 1 ರವರು ಚಿಕ್ಕಯ್ಯರವರ ಮಗನಾದ ನಾಗರಾಜು ಎಂಬುವವರಿಗೆ 10 ಸಾವಿರ ರೂಪಾಯಿಗಳಿಗೆ ಭೋಗ್ಯ ಮಾಡಿದ್ದು, ಸದರಿ ಬಸವಯ್ಯರವರು ಬೆಂಗಳೂರಿಗೆ ಹೋಗಿದ್ದು, 2012 ರಲ್ಲಿ ನಾಗರಾಜುರವರು ವಾಪಸ್ ಊರಿಗೆ ಬಂದಾಗ ಭೋಗ್ಯದ ಹಣವನ್ನು ಪಾವತಿ ಮಾಡಿ ಭೋಗ್ಯವನ್ನು ತೀರುವಳಿ ಮಾಡಿಸಲು ಚಾಸಾ 1 ರವರು ಅವರ ಮನೆಯ ಬಳಿ ಹೋಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಕಾಲಕ್ಕೆ ನಾಗರಾಜುರವರು ಮೃತ ಪಟ್ಟಿರುವ ಬಗ್ಗೆ ಅವರ ಪತ್ನಿಯು ತಿಳಿಸಿದಾಗ ನಾಗರಾಜುರವರು ಅವರ ಪತ್ನಿ ಮತ್ತು ಮಕ್ಕಳನ್ನು ಸಂಪರ್ಕಿಸಿ, ಭೋಗ್ಯದ ತಿರುವಳಿ ಬಗ್ಗೆ ಕೇಳಿದಾಗ ಸದರಿ ಸ್ವತ್ತು ಚಾಸಾ 1 ರವರಿಂದ ಬಿ.ಸಿ. ವೀರಣ್ಣರವರಿಗೆ ಕ್ರಯವಾಗಿರುವ ಬಗ್ಗೆ ವಿಚಾರ ತಿಳಿದು ಅದೇ ರೀತಿ ಸದರಿಯವರು ಸ್ವಾಧಿನದಲ್ಲಿರುವ ಬಗ್ಗೆ ವಿಚಾರ ತಿಳಿದು ದಾಖಲೆಗಳನ್ನು ಪರಿಶೀಲಿಸಿದಾಗ ದಿ: 21.06.2010 ರಂದು ನಾಗರಾಜುರವರು ಭೋಗ್ಯ ತೀರುವಳಿ ಮಾಡಿದಂತೆ ದಾಖಲೆಯನ್ನು ಸೃಷ್ಟಿ ಮಾಡಿರುವುದು ಬಿ.ಸಿ. ವೀರಣ್ಣ ರವರು ಮತ್ತು ಇತರರು ಸೇರಿ ಸಂಚು ರೂಪಿಸಿ, ದಾಖಲೆಗಳನ್ನು ಸೃಷ್ಟಿ ಮಾಡಿ ಬಸವಯ್ಯ ರವರ ಸಹಿಯನ್ನು ಫೋರ್ಜರಿ ಮಾಡಿ, ಅವರ

ಬದಲಾಗಿ ಕುನ್ನೇಗೌಡ ಎಂಬ ವ್ಯಕ್ತಿಯನ್ನು ನೊಂದಣಿ ಕಛೇರಿಗೆ ಕರೆತಂದು ದಾಖಲೆಯನ್ನು ಸೃಷ್ಟಿ ಮಾಡಿದ್ದು, ಮೋಸ ಮಾಡಿರುತ್ತಾರೆ ಎಂದು ಸದರಿ ಸಂಗತಿಯು ನನಗೆ ಗೊತ್ತು ಎಂದು ಈಗ ಓದಿ ಹೇಳಲಾದಂತೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಅದನ್ನು ನಿಪಿ 11 ಎಂದು ಗುರುತಿಸಲಾಯಿತು. ಎಲ್ಲಾ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃಆರೋಪಿ ಪರ: ವಕೀಲರಿಂದ</u>

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.